**ದೋ.ಸಾ. : 57 ಫ್ರಾ.ಸಾ. :44**

ಸಾಕ್ಷಿಯ ಹೆಸರು : ಅರುಣ್ ಕುಮಾರ್ ಕೊಳೂರ

**ದಿನಾಂಕಃ 17-04-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

21. ಚಾಸಾ-32 ರವರು ತಮ್ಮ ಹೇಳಿಕೆಯಲ್ಲಿ "ದಿ.14-02-2014 ರಂದು ರಾತ್ರಿ 10.45 ಕ್ಕೆ ಆರೋಪಿಯು ನನಗೆ ಕರೆ ಮಾಡಿದ್ದ" ಎಂದು ಹೇಳಿದ್ದು, ಅದರಂತೆ ಚಾಸಾ-32 ರವರ ಮೊಬೈಲ್ ನಂಬರನ್ನು ಕೇಳಿ ತಿಳಿದುಕೊಳ್ಳಲಾಗಿ, ಆತ ತನ್ನ ಮೊಬೈಲ್ ನಂ.9449574341 ಆಗಿರುತ್ತದೆ ಎಂದು ತಿಳಿಸಿರುತ್ತಾನೆ. ದಿ.21-02-2014 ರಂದು ಪೊಲೀಸ್ ಅಧೀಕ್ಷಕರ ಕಚೇರಿಯಿಂದ ಮೃತ ವೇಲುವಿನ ಮೊಬೈಲ್ ನಂ.808878182, 9481061419 ಮತ್ತು ಆರೋಪಿಯ ಮೊಬೈಲ್ ನಂ.9663275728 ನೇದರ ಸಿ.ಡಿ.ಆರ್. ಹಾಗೂ ಎಸ್.ಡಿ.ಆರ್. ಮಾಹಿತಿಯನ್ನು ಬಂದಿದ್ದು, ಅದನ್ನು ಚಾಸಾ-48 ರವರು ಮರುದಿನ ಅಂದರೆ 22-02-2014 ರಂದು ನನಗೆ ನೀಡಿರುತ್ತಾರೆ. ಸದರಿ ಎಸ್.ಡಿ.ಆರ್. ಗಳನ್ನು ಪರಿಶೀಲಿಸಲಾಗಿ, ಆರೋಪಿಯು ಉಪಯೋಗಿಸುತ್ತಿದ್ದ ಮೊಬೈಲ್ ನಂ.9663275728 ಆತನ ತಂದೆಯ ಹೆಸರಿನಲ್ಲಿರುವುದು ಕಂಡುಬಂದಿರುತ್ತದೆ. ಅದೇ ರೀತಿ, ಮೊಬೈಲ್ ನಂ.808878182 ವೇಲುವಿನ ಹೆಸರಿನಲ್ಲಿ ಹಾಗೂ ಮೊಬೈಲ್ ನಂ.9481061419 ಜಾನಕಿಯ ಹೆಸರಿನಲ್ಲಿರುವುದು ಕಂಡುಬಂದಿರುತ್ತದೆ. ಆನಂತರ ಸಿ.ಡಿ.ಆರ್. ಗಳನ್ನು ಪರಿಶೀಲಿಸಲಾಗಿ, ದಿ.12-02-2014 ರಂದು ವೇಲು ಹಾಗೂ ಆರೋಪಿಯು ಪರಸ್ಪರ 13 ಬಾರಿ, ದಿ.13-02-2014 ರಂದು 3 ಬಾರಿ, ದಿ.14-02-2014 ರಂದು 4 ಬಾರಿ ಕರೆ ಮಾಡಿರುವುದು ಕಂಡುಬಂದಿರುತ್ತದೆ ಮತ್ತು ಕೊನೆಯ ಬಾರಿ ಆರೋಪಿಯ ತನ್ನ ಮೊಬೈಲಿನಿಂದ ವೇಲುವಿನ ಮೊಬೈಲಿಗೆ ರಾತ್ರಿ 21.30 ಗಂಟೆ 18 ಸೆಕೆಂಡಿಗೆ ಕರೆ ಮಾಡಿದ್ದು, ಒಟ್ಟು 43 ಸೆಕೆಂಡುಗಳ ಕಾಲ ಮಾತನಾಡಿರುವುದು ಕಂಡುಬಂದಿರುತ್ತದೆ. ಆರೋಪಿಯ ಮೊಬೈಲ್ ನಂಬರಿನ ಸಿ.ಡಿ.ಆರ್. ಪರಿಶೀಲಿಸಿದಾಗ, ಆರೋಪಿಯು ಚಾಸಾ-32 ರವರಿಗೆ ದಿ.14-02-2014 ರಂದು ರಾತ್ರಿ 22.31 ಗಂಟೆ 51 ಸೆಕೆಂಡಿಗೆ ಕರೆ ಮಾಡಿ, ಒಟ್ಟು 52 ಸೆಕೆಂಡುಗಳ ವರೆಗೆ ಮಾತನಾಡಿರುವುದು ಕಂಡುಬಂದಿರುತ್ತದೆ. ನಂತರ ಸದರಿ ಸಿ.ಡಿ.ಆರ್. ಹಾಗೂ ಎಸ್.ಡಿ.ಆರ್. ಗಳನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಜಾನಕಿಯ ಹೆಸರಿನಲ್ಲಿದ್ದ ಸಿ.ಡಿ.ಆರ್. ನ್ನು ಈಗಾಗಲೇ ನಿಪಿ-101

ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–101(ಎ) ಎಂದು ಗುರುತಿಸಲಾಯಿತು. ವೇಲುವಿನ ಹೆಸರಿನಲ್ಲಿದ್ದ ಸಿ.ಡಿ.ಆರ್. ನ್ನು ಈಗಾಗಲೇ ನಿಪಿ–102 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–102(ಎ) ಎಂದು ಗುರುತಿಸಲಾಯಿತು. ಆರೋಪಿಯ ತಂದೆಯ ಹೆಸರಿನಲ್ಲಿದ್ದ ಸಿ.ಡಿ.ಆರ್. ನ್ನು ಈಗಾಗಲೇ ನಿಪಿ–103 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–103(ಎ) ಎಂದು ಗುರುತಿಸಲಾಯಿತು.

22. ಅದೇ ದಿನ ಚಾಸಾ–22 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅವರು ತಮ್ಮ ಹೇಳಿಕೆಯಲ್ಲಿ "ನನಗೆ ಕನ್ನಡ ಮತ್ತು ತಮಿಳು ಎರಡು ಭಾಷೆಗಳು ಮಾತನಾಡಲು ಬರುತ್ತದೆ ಮತ್ತು ಆರೋಪಿಯು ನಮ್ಮ ಕುಟುಂಬಕ್ಕೆ ಪರಿಚಿತನಾಗಿದ್ದು, ಆಗಾಗ್ಗೆ ನಮ್ಮ ಮನೆಗೆ ಬಂದು, ಹೋಗುತ್ತಿದ್ದನು, ಈ ಹಿಂದೆ ಆರೋಪಿಯು ನಮ್ಮ ಮನೆಯ ಅಲ್ಮೇರಾದಲ್ಲಿದ್ದ ರೂ.45,000/– ಗಳನ್ನು ಕಳವು ಮಾಡಿಕೊಂಡು ಹೋಗಿದ್ದು, ಸದರಿ ಹಣದ ಪೈಕಿ ರೂ.37,000/– ಗಳನ್ನು ಮನೆಯ ಬಾಗಿಲಲ್ಲಿಟ್ಟು ಹೋಗಿದ್ದನು, ಉಳಿದ ಹಣವನ್ನು ಕೊಡುವಂತೆ ಹೇಳಿದ್ದರೂ, ಹಣ ಕೊಡದೇ ಸತಾಯಿಸುತ್ತಿದ್ದ ಎಂದು ನನ್ನ ಗಂಡ ವೇಲು ನನ್ನ ಬಳಿ ಹೇಳಿದ್ದ ಹಾಗೂ ದಿ.13–02–2014 ರಂದು ರಾತ್ರಿ 10.00 ಗಂಟೆ ಸುಮಾರಿಗೆ ಮನೆಯ ಮುಂಭಾಗದಲ್ಲಿ ವೇಲು ಮತ್ತು ಆರೋಪಿಯು ಹಣದ ವಿಷಯವಾಗಿ ಜಗಳ ಮಾಡಿಕೊಂಡಿದ್ದನ್ನು ನಾನು ನೋಡಿರುತ್ತೇನೆ, ದಿ.14–02–2014 ರಂದು ಸಂಜೆ ನಾನು ಮನೆಯಲ್ಲಿದ್ದಾಗ, ನನ್ನ ಗಂಡ ವೇಲು ಮತ್ತು ಇಬ್ಬರು ಮಕ್ಕಳು ದೇವಸ್ಥಾನಕ್ಕೆ ಹೋಗಿ ವಾಪಾಸು ಬಂದು ಊಟ ಮಾಡಿದ ನಂತರ, ವೇಲುವಿನ ಮೊಬೈಲಿಗೆ ಕರೆ ಬಂದಿದ್ದು, ಆಗ ಸದರಿ ಕರೆಯಲ್ಲಿ ಆರೋಪಿಯು ವೇಲುವಿಗೆ, ಹಣ ಕೊಡುತ್ತೇನೆ ಬಾ ಎಂದು ಕರೆದಿದ್ದು, ಆಗ ವೇಲು ಮಗ ಸತ್ಯನಾರಾಯಣ ಮೂರ್ತಿಯನ್ನು ಕರೆದುಕೊಂಡು ಹೊರಗೆ ಹೋಗಿರುತ್ತಾರೆ, ಆ ಸಮಯದಲ್ಲಿ ನಾನು ಲೈಟ್ ಬೆಳಕಿನಲ್ಲಿ ನೋಡಿದ್ದು, ರಸ್ತೆಯ ಮೇಲೆ ವೇಲು ಮತ್ತು ಸತ್ಯನಾರಾಯಣ ಮೂರ್ತಿ ಹಾಗೂ ಆರೋಪಿಯು ನಿಂತಿದ್ದನ್ನು ನೋಡಿರುತ್ತೇನೆ, ನಂತರ ನಾನು ಮನೆಯ ಬಾಗಿಲನ್ನು ಹಾಕಿಕೊಂಡಿರುತ್ತೇನೆ, ಸ್ವಲ್ಪ ಹೊತ್ತಿನ ನಂತರ ನಮ್ಮ ಮನೆಯ ಕರೆಂಟ್ ಹೋಗಿದ್ದು, ಸ್ವಲ್ಪ ಹೊತ್ತಿನಲ್ಲಿ ಯಾರೋ ಬಾಗಿಲು ಬಡಿದು, ಬಾಗಿಲು ತೆರೆಯುವಂತೆ ಹೇಳಿದ್ದು, ಆ ಸಮಯದಲ್ಲಿ ಮನೆಯಲ್ಲಿ ಕರೆಂಟ್ ಇಲ್ಲದ ಕಾರಣ, ನಾನು ಚಿಮುಣಿ ದೀಪವನ್ನು ಹಚ್ಚಿ ಬಾಗಿಲು ತೆರೆದಾಗ, ಆರೋಪಿಯು ಮನೆಯ ಒಳಗೆ ಬಂದು, ನಿನ್ನ ಮಗಳನ್ನು ನನ್ನ

ಜೊತೆ ಕಳುಹಿಸಿಕೊಡು ಎಂದು ಹೇಳಿದಾಗ, ನಾನು ಆತನಿಗೆ ನನ್ನ ಮಗಳು ಮಲಗುತ್ತಾಳೆ, ಕಳುಹಿಸುವುದಿಲ್ಲ ಎಂದಾಗ, ಆರೋಪಿಯು ತನ್ನ ಕೈಯಲ್ಲಿದ್ದ ಕತ್ತಿಯಿಂದ ನನಗೆ ಹೊಡೆದಿದ್ದು, ಆಗ ನಾನು ರಕ್ಷಣೆಗಾಗಿ ನನ್ನ ಎಡಗೈಯನ್ನು ಅಡ್ಡ ಮಾಡಿದ್ದು, ಕತ್ತಿಯ ಹೊಡೆತದಿಂದ ನನ್ನ ಎಡಗೈ ತುಂಡಾಗಿ, ನನ್ನ ಹಣೆಯ ಮೇಲೆ ಕತ್ತಿಯಿಂದ ಹೊಡೆದ ಗಾಯವಾಗಿರುತ್ತದೆ, ಆಗ ನಾನು ಅಲ್ಲಿಯೇ ಕುಸಿದು ಬಿದ್ದಿದ್ದು, ಆಗ ನನ್ನ ಮಗಳು ಅಶ್ವಿನಿಯು ಜೋರಾಗಿ ಕೂಗಿಕೊಂಡಿದ್ದು, ಆರೋಪಿಯು ಅವಳ ಕುತ್ತಿಗೆಗೂ ಸಹ ಕತ್ತಿಯಿಂದ ಹೊಡೆದಿದ್ದು, ನಾನು ಅದನ್ನು ನೋಡಿದ ಕೂಡಲೇ ಪ್ರಜ್ಞೆ ತಪ್ಪಿರುತ್ತೇನೆ, ನಂತರ ನನಗೆ ಪ್ರಜ್ಞೆ ಬಂದು ನೋಡಿದಾಗ, ನನ್ನ ಮಗಳ ಕುತ್ತಿಗೆಯ ಬಳಿ ಹಾಗೂ ಕೈಯ ಮೇಲೆ ಕತ್ತಿಯಿಂದ ಕಡಿದ ಗಾಯವಾಗಿ ಮೃತಪಟ್ಟಿದ್ದಳು, ನಂತರ ನಾನು ದೇವರ ಮನೆಯಲ್ಲಿದ್ದ ಸಮಯ್ (ದೀಪ) ವನ್ನು ಹಚ್ಚಿ ಕುಳಿತುಕೊಂಡಿದ್ದಾಗ, ಆ್ಯಂಬುಲೆನ್ಸ್ ಬಂದಿದ್ದು, ನನ್ನನ್ನು ಮೊದಲಿಗೆ ಕದ್ರಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ, ನಂತರ ಕಾರವಾರ ಜಿಲ್ಲಾಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿಂದ ಗೋವಾದ ಬಾಂಬೋಲಿಮ್ ಆಸ್ಪತ್ರೆಗೆ ಕರೆದುಕೊಂಡು ಹೋದರು, ಸದರಿ ಆಸ್ಪತ್ರೆಯಲ್ಲಿ ನಾನು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾಗ, ದಿ.15-02-2014 ರಂದು ಪೊಲೀಸರು ಬಂದು ಘಟನೆಯ ಬಗ್ಗೆ ನನ್ನ ಬಳಿ ವಿಚಾರಿಸಿರುತ್ತಾರೆ, ಆಗ ನಾನು ಕದ್ರಾ ಚರ್ಚ್ ವಾಡದ ಗಿರಿ ಇವನು ಈ ಹಿಂದೆ ನಮ್ಮ ಮನೆಯಲ್ಲಿ ಕಳವು ಮಾಡಿದ ಹಣದಲ್ಲಿ ಉಳಿದ ಹಣ ಕೊಡಬೇಕಾದ ವಿಷಯದಲ್ಲಿ, ದ್ವೇಷವನ್ನು ಹೊಂದಿದ್ದು, ಕೊಲೆ ಮಾಡುವ ಉದ್ದೇಶದಿಂದ, ನನ್ನ ಗಂಡ ಮತ್ತು ಮಕ್ಕಳನ್ನು ಕೊಲೆ ಮಾಡಿರುತ್ತಾನೆ ಹಾಗೂ ನನ್ನನ್ನೂ ಸಹ ಕೊಲೆ ಮಾಡುವ ಉದ್ದೇಶದಿಂದ ಕತ್ತಿಯಿಂದ ನನ್ನ ಮೇಲೆ ಹಲ್ಲೆ ಮಾಡಿರುತ್ತಾನೆ" ಎಂದು ಹೇಳಿಕೆ ನೀಡಿದ್ದು, ಸದರಿ ಚಾಸಾ-22 ರವರು ಈಗ ಮೃತಪಟ್ಟಿರುವ ಕಾರಣ, ಅವರ ಹೇಳಿಕೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-108 ಎಂದು ಗುರುತಿಸಲಾಯಿತು.

23. ಅದೇ ದಿನ ಚಾಸಾ-22 ಗಾಯಾಳು ಜಾನಕಿಯು ಬಾಂಬೋಲಿಮ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಡಿಸ್ಚಾರ್ಜ್ ಸಮ್ಮರಿಯನ್ನು ಸ್ವೀಕರಿಸಿ, ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ಡಿಸ್ಚಾರ್ಜ್ ಸಮ್ಮರಿಯನ್ನು ಈಗಾಗಲೇ ನಿಪಿ-98 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-98(ಬಿ) ಎಂದು ಗುರುತಿಸಲಾಯಿತು. ದಿ.24-02-2014 ರಂದು ಕದ್ರಾ ಗ್ರಾಮ ಪಂಚಾಯತ್ ನ ಪಿ.ಡಿ.ಓ ರವರಿಗೆ ಮೃತ ವೇಲುವಿನ ಮನೆಯ ನಂಬರನ್ನು ಹಾಗೂ ಅದು ಯಾರ ಹೆಸರಿನಲ್ಲಿರುತ್ತದೆ ಎಂಬ ಬಗ್ಗೆ ಮಾಹಿತಿ

ಕೋರಿಕೊಂಡಿರುತ್ತೇನೆ. ಸದರಿ ಕೋರಿಕೆ ಪತ್ರವನ್ನು ಈಗಾಗಲೇ ನಿಪಿ-52 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-52(ಬಿ) ಎಂದು ಗುರುತಿಸಲಾಯಿತು. ದಿ.28-02-2014 ರಂದು ಕದ್ರಾದ ರಾಜೀವ್ ನಗರದಲ್ಲಿ ದಿ.14-02-2014 ರಂದು ಸಂಜೆ ಯಿಂದ ರಾತ್ರಿ 12.00 ಗಂಟೆಯವರೆಗೆ ವಿದ್ಯುತ್ ಸರಬರಾಜು ಇದ್ದ ಬಗ್ಗೆ ಮಾಹಿತಿ ನೀಡುವಂತೆ ಕದ್ರಾದ ಹೆಸ್ಕಾಂ ಕಚೇರಿಗೆ ಕೋರಿಕೆ ಪತ್ರವನ್ನು ನೀಡಿರುತ್ತೇನೆ. ಸದರಿ ಕೋರಿಕೆ ಪತ್ರವನ್ನು ಈಗಾಗಲೇ ನಿಪಿ-50 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-50(ಬಿ) ಎಂದು ಗುರುತಿಸಲಾಯಿತು. ದಿ.02-03-2014 ರಂದು ಕಾರವಾರ ಜಿಲ್ಲಾ ಪಂಚಾಯತ್ ನ ಇಂಜಿನಿಯರಿಂಗ್ ಉಪ ವಿಭಾಗದವರಿಗೆ ಘಟನಾ ಸ್ಥಳದ ನಕಾಶೆ ತಯಾರಿಸಿಕೊಡುವಂತೆ ಕೋರಿಕೊಂಡಿರುತ್ತೇನೆ. ಸದರಿ ಕೋರಿಕೆ ಪತ್ರವನ್ನು ಈಗಾಗಲೇ ನಿಪಿ-47 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-47(ಎ) ಎಂದು ಗುರುತಿಸಲಾಯಿತು. ಆನಂತರ ಚಾಸಾ-46 ರವರು ತನಿಖಾ ಸಮಯದಲ್ಲಿ ತೆಗೆದ ಪೋಟೊ ಮತ್ತು ವೀಡಿಯೋಗಳನ್ನು ಸಿ.ಡಿ.ಗೆ ವರ್ಗಾಯಿಸಿ, ದಿ.05-03-2014 ರಂದು ಪೋಟೊಗಳನ್ನು ಮತ್ತು ಸಿ.ಡಿ.ಗಳನ್ನು ನನಗೆ ನೀಡಿದ್ದು, ಅವುಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಿ.ಡಿ.ಯನ್ನು ಈಗಾಗಲೇ ನಿಪಿ-91 ಎಂದು ಗುರುತಿಸಲಾಗಿರುತ್ತದೆ. ಅದೇ ದಿನ ಚಾಸಾ-46 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ.07-03-2014 ರಂದು ಚಾಸಾ-35 ರವರಿಂದ ಮೃತ ವೇಲುವಿನ ಮರಣೋತ್ತರ ಪರೀಕ್ಷಾ ವರದಿಯನ್ನು, ಚಾಸಾ-34 ರವರಿಂದ ಮೃತ ಸತ್ಯನಾರಾಯಣ ಮೂರ್ತಿಯ ಮರಣೋತ್ತರ ಪರೀಕ್ಷಾ ವರದಿಯನ್ನು, ಚಾಸಾ-34 ರವರಿಂದ ಮೃತೆ ಅಶ್ವಿನಿಯ ಮರಣೋತ್ತರ ಪರೀಕ್ಷಾ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ವೇಲುವಿನ ಮರಣೋತ್ತರ ಪರೀಕ್ಷಾ ವರದಿಯನ್ನು ಈಗಾಗಲೇ ನಿಪಿ-79 ಎಂದು, ಸತ್ಯನಾರಾಯಣ ಮೂರ್ತಿಯ ಮರಣೋತ್ತರ ಪರೀಕ್ಷಾ ವರದಿಯನ್ನು ನಿಪಿ-74 ಎಂದು, ಅಶ್ವಿನಿಯ ಮರಣೋತ್ತರ ಪರೀಕ್ಷಾ ವರದಿಯನ್ನು ನಿಪಿ-82 ಎಂದು ಗುರುತಿಸಲಾಗಿದ್ದು, ಅವುಗಳಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-79(ಸಿ), ನಿಪಿ-74(ಸಿ) ಮತ್ತು ನಿಪಿ-82(ಸಿ) ಎಂದು ಗುರುತಿಸಲಾಯಿತು.

24. ತನಿಖೆಯ ಸಮಯದಲ್ಲಿ ವಶಪಡಿಸಿಕೊಂಡ ಮುದ್ದೆಮಾಲುಗಳ ಪೈಕಿ ವೇಲುವಿನ ಊರುಗೋಲು ಮತ್ತು ಮೊಬೈಲ್ ಫೋನುಗಳನ್ನು ಹೊರತುಪಡಿಸಿ, ಉಳಿದ ಮುದ್ದೆಮಾಲುಗಳನ್ನು ತಜ್ಞರ ಪರೀಕ್ಷೆಗಾಗಿ ಚಾಸಾ-53, 54 ರವರ ಮೂಲಕ ದಿ.25-03-

2014 ರಂದು ಮಂಗಳೂರಿನ ಆರ್.ಎಫ್.ಎಸ್.ಎಲ್. ಗೆ ಕಳುಹಿಸಿಕೊಟ್ಟಿರುತ್ತೇನೆ. ಆನಂತರ ದಿ.27-03-2014 ರಂದು ಚಾಸಾ-53 ಮತ್ತು 54 ರವರು ಆರ್.ಎಫ್.ಎಸ್.ಎಲ್. ಮಂಗಳೂರು ರವರಿಂದ ಸ್ವೀಕೃತಿ ಪತ್ರವನ್ನು ಪಡೆದುಕೊಂಡು ಬಂದು ನನಗೆ ನೀಡಿದ್ದು, ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ಸ್ವಿಕೃತಿ ಪತ್ರವನ್ನು ಈಗಾಗಲೇ ನಿಪಿ-97 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-97(ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-53 ರವರು ಮುದ್ದೆಮಾಲುಗಳನ್ನು ಆರ್.ಎಫ್.ಎಸ್.ಎಲ್. ಗೆ ತಲುಪಿಸಿದ ಬಗ್ಗೆ ಮತ್ತು ಚಾಸಾ-54 ರವರೂ ಸಹ ಮುದ್ದೆಮಾಲುಗಳನ್ನು ಆರ್.ಎಫ್.ಎಸ್.ಎಲ್. ಗೆ ತಲುಪಿಸಿದ ಬಗ್ಗೆ ಹಾಗೂ ಪ್ರ.ವ. ವರದಿಯನ್ನು ನ್ಯಾಯಾಲಯಕ್ಕೆ ತಲುಪಿಸಿದ ಬಗ್ಗೆ ಹೇಳಿಕೆಗಳನ್ನು ನೀಡಿದ್ದು, ಸದರಿ ಹೇಳಿಕೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಕದ್ರಾ ಗ್ರಾಮ ಪಂಚಾಯತ್ ನ ಪಿ.ಡಿ.ಓ. ಆದ ಚಾಸಾ-43 ರವರು ಮೃತ ವೇಲುವಿನ ಮನೆಯ ನಂ.511/122 ಎಂದು ಹಾಗೂ ಸದರಿ ಮನೆಯು ಮೃತ ವೇಲುವಿನ ಹೆಸರಿನಲ್ಲಿರುತ್ತದೆ ಎಂದು ದಾಖಲೆ ನೀಡಿರುತ್ತಾರೆ. ಪಿ.ಡಿ.ಓ. ರವರು ನೀಡಿದ ದಾಖಲೆಯನ್ನು ಈಗಾಗಲೇ ನಿಪಿ-53 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-53(ಬಿ) ಎಂದು ಗುರುತಿಸಲಾಯಿತು. ದಿ.01-04-2014 ರಂದು ಚಾಸಾ-42 ರವರು ದಿ.14-02-2014 ರಂದು ಸಂಜೆ ಯಿಂದ ರಾತ್ರಿ 11.00 ಗಂಟೆಯ ಪೂರ್ವದವರೆಗೆ ರಾಜೀವ್ ನಗರದಲ್ಲಿ ವಿದ್ಯುತ್ ಪೂರೈಕೆ ಇದ್ದ ಬಗ್ಗೆ ಮಾಹಿತಿ ನೀಡಿದ್ದು, ಅದನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ಮಾಹಿತಿಯನ್ನು ಈಗಾಗಲೇ ನಿಪಿ-51 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-51(ಬಿ) ಎಂದು ಗುರುತಿಸಲಾಯಿತು.

25. ದಿ.02-04-2014 ರಂದು ಘಾಡಸಾಯಿ ಉಪ ತಹಶೀಲ್ದಾರ್ ರವರಿಗೆ ವೇಲು ಹಾಗೂ ಆತನ ಮಗ ಸತ್ಯನಾರಾಯಣ ಮೂರ್ತಿಯ ಶವ ಬಿದ್ದಿದ್ದ ಸ್ಥಳದ ಅರಣ್ಯ ಸರ್ವೆ ನಂಬರನ್ನು ಪೂರೈಸುವಂತೆ ಕೋರಿಕೊಂಡಿರುತ್ತೇನೆ. ಸದರಿ ಕೋರಿಕೆ ಪತ್ರವನ್ನು ಈಗಾಗಲೇ ನಿಪಿ-54 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-54(ಬಿ) ಎಂದು ಗುರುತಿಸಲಾಯಿತು. ದಿ.03-04-2014 ರಂದು ಕಾರವಾರ ಜಿಲ್ಲಾಸ್ಪತ್ರೆಯ ವೈದ್ಯಾಧಿಕಾರಿಗಳಿಗೆ ಬಾಂಬೋಲಿಮ್ ಆಸ್ಪತ್ರೆಯಿಂದ ಬಂದ ಡಿಸ್ಚಾರ್ಜ್ ಸಮ್ಮರಿಯನ್ನು ಪರಿಶೀಲಿಸಿ, ಜಾನಕಿಯ ಗಾಯದ ಪ್ರಮಾಣ ಪತ್ರವನ್ನು ನೀಡುವಂತೆ ಕೋರಿಕೊಂಡಿರುತ್ತೇನೆ.

ದಿ.05-04-2014 ರಂದು ಚಾಸಾ-41 ರವರಿಂದ ಘಟನಾ ಸ್ಥಳದ ನಕಾಶೆಯನ್ನು ಕವಚ ಪತ್ರದೊಂದಿಗೆ ಪಡೆದುಕೊಂಡು, ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಕಾಶೆಯನ್ನು ಈಗಾಗಲೇ ನಿಪಿ-48 ಎಂದು, ಕವಚ ಪತ್ರವನ್ನು ನಿಪಿ-49 ಎಂದು ಗುರುತಿಸಲಾಗಿದ್ದು, ಅವುಗಳಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-48(ಬಿ) ಮತ್ತು 49(ಎ) ಎಂದು ಗುರುತಿಸಲಾಯಿತು. ದಿ.12-04-2014 ರಂದು ಚಾಸಾ-37 ರವರಿಂದ ಜಾನಕಿಯ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ಗಾಯದ ಪ್ರಮಾಣ ಪತ್ರವನ್ನು ಈಗಾಗಲೇ ನಿಪಿ-93 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-93(ಬಿ) ಎಂದು ಗುರುತಿಸಲಾಯಿತು. ದಿ.26-04-2014 ರಂದು ಆರ್.ಎಫ್.ಎಸ್.ಎಲ್. ಮಂಗಳೂರುರವರಿಂದ ವರದಿಯನ್ನು ಮಾದರಿ ಮೊಹರಿನೊಂದಿಗೆ ಪಡೆದುಕೊಂಡಿರುತ್ತೇನೆ. ಸದರಿ ವರದಿಯನ್ನು ಹಾಗೂ ಮಾದರಿ ಮೊಹರನ್ನು ಈಗಾಗಲೇ ನಿಪಿ-89 ಮತ್ತು 90 ಎಂದು ಗುರುತಿಸಲಾಗಿದ್ದು, ವರದಿಯಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-89(ಬಿ) ಎಂದು ಗುರುತಿಸಲಾಯಿತು.

(ನ್ಯಾಯಾಲಯದ ಅವಧಿ ಮುಗಿದಿದ್ದರಿಂದ, ಮುಂದುವರೆದ ಮುಖ್ಯ ವಿಚಾರಣೆಗೆ ಹಾಗೂ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

*Sd/-*

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ.